ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

34

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ವಾರ್ತೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 10/9/2020

## ಬಿಗಿ ಭದ್ರತೆ ಮಧ್ಯೆ ಕಂಗನಾ ಮುಂಬಯಿಗೆ

### ಕಟ್ಟಡ ಭಾಗಶಃ ಧ್ವಂಸ | ಕೋರ್ಟ್ ತಡೆ

# ಕ್ವೀನ್ ವಿರುದ್ಧ ಸೇನಾ ಬುಲ್ಡೋಜರ್ ಅಸ್ತ್ರ

**ಮುಂಬಯಿ:** ಮಹಾರಾಷ್ಟ್ರದ ಶಿವಸೇನಾ-ಕಾಂಗ್ರೆಸ್ ಸರಕಾರ ಮತ್ತು ನಟಿ ಕಂಗನಾ ರಣಾವತ್ ಸಂಘರ್ಷ ಬುಧವಾರ ತಾರಕಕ್ಕೇರಿದೆ.

ಸಾಧ್ಯವಾದರೆ ಮುಂಬಯಿ ಪ್ರವೇಶ ತಡೆಯುವಂತೆ ಸವಾಲು ಹಾಕಿದ್ದ ನಟಿ ಕಂಗನಾ ಬುಧವಾರ ತಮ್ಮ ತವರಾದ ಹಿಮಾಚಲ ಪ್ರದೇಶದಿಂದ ವೈ ಪ್ಲಸ್ ಭದ್ರತೆಯಲ್ಲಿ ಮುಂಬಯಿಗೆ ಆಗಮಿಸಿದರು. ಆದರೆ, ಅವರು ಮುಂಬಯಿಗೆ ಕಾಲಿಡುವ ಕೆಲವೇ ಗಂಟೆಗಳಿಗೆ ಮೊದಲು ಕಂಗನಾ ಪ್ರಸ್ತುತ ಕಚೇರಿಯಾಗಿ ಬಳಸುತ್ತಿರುವ 'ಮಣಿಕರ್ಣಿಕಾ' ನಿವಾಸದ ಭಾಗವೊಂದನ್ನು ಬೃಹನ್ಮುಂಬಯಿ ಮಹಾನಗರ ಪಾಲಿಕೆ ಅಧಿಕಾರಿಗಳು ಧ್ವಂಸಗೊಳಿಸಿದ್ದರು.

ನಿಯಮ ಉಲ್ಲಂಘಿಸಿ ಮನೆ ನವೀಕರಿಸಲಾಗಿದೆ ಎನ್ನುವುದು ಪಾಲಿಕೆ ವಾದ. ಆದರೆ, ತಕ್ಷಣವೇ ಬಾಂಬೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದ ಕಟ್ಟಡ ಧ್ವಂಸ ಅರ್ಧಕ್ಕೇ ನಿಂತಿತು.





ಸಿಎಂ ಉದ್ಧವ್ ಠಾಕ್ರೆ, ಇವತ್ತು ನೀನು ನನ್ನ ಮನೆಯನ್ನು ಕೆಡವಿ ಉದ್ಧಟತನ ತೋರಿದ್ದೀಯಾ. ಇದು ಕಾಲಚಕ್ರ. ನಾಳೆ ನಿನ್ನ ಅಹಂಕಾರವೂ ಇದೇ ರೀತಿ ಕುಸಿದು ಬೀಳಲಿದೆ. ನಾನು ಸತ್ತರೂ ಬೆದರಿಕೆಗೆ ಬಗ್ಗಲ್ಲ, ಹೋರಾಡುವೆ.

- **ಕಂಗನಾ ರಣಾವತ್** ನಟಿ

### ವಿವಾದದ ಮೂಲ ಏನು?

ನಟ ಸುಶಾಂತ್ ಸಿಂಗ್ ಆತ್ಮಹತ್ಯೆಗೆ ಬಾಲಿವುಡ್‌ನ ಸ್ವಜನ ಪಕ್ಷಪಾತವೇ ಕಾರಣ ಎಂದು ಆಪಾದಿಸುತ್ತಿರುವ ಕಂಗನಾ ಮುಂಬಯಿಯನ್ನು ಪಾಕ್ ಆಕ್ರಮಿತ ಕಾಶ್ಮೀರಕ್ಕೆ ಹೋಲಿಸಿದ್ದು ಶಿವಸೇನೆಯನ್ನು ಕೆರಳಿಸಿದೆ. ಬಿಜೆಪಿ ಕಂಗನಾ ಬೆಂಬಲಕ್ಕಿದೆ.